<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,</u>
ಶ್ರೀರಂಗಪಟ್ಟಣ.

ಸಿ.ಸಿ.: 101/2017

ಪಿ. ಡಬ್ಲ್ಯು: 03
ಸಿ. ಡಬ್ಲ್ಯು: 03

| | | |
|---|---|---|
| ಸಾಕ್ಷಿದಾರರ ಹೆಸರು | : | ಈಶ್ವರ |
| ತಂದೆ/ಪತಿಯ ಹೆಸರು | : | ಅಪ್ಪಾಜಯ್ಯ |
| ವಯಸ್ಸು | : | 38 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಚಿಕ್ಕನಹಳ್ಳಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 12.09.2023
ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ಚಾಸಾ.1, 2 ಮತ್ತು 4 ಗೊತ್ತು. ಆರೋಪಿತರು ಗೊತ್ತು.

ದಿ: 26.04.2016 ರಂದು ಸಂಜೆ 05.30 ಸಮಯದಲ್ಲಿ ನಾನು ಪಿರ್ಯಾದಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೇನು. ಜಮೀನಿನ ಹತ್ತಿರವಿರುವ ಗಾಡಿ ಜಾಡಿನಲ್ಲಿ ಆರೋಪಿತರು ಮತ್ತು ರವಿ ಹಾಗೂ ರಘು ದೊಣ್ಣೆಯಿಂದ ಗಲಾಟೆ ಮಾಡುತ್ತಿದ್ದರು. ನಾನು ಮತ್ತು ಸ್ವಾಮಿ ಹೋಗಿ ಜಗಳ ಬಿಡಿಸಿದ್ದೇವೆ. ಆರೋಪಿತರು ರವಿಗೆ ದೊಣ್ಣೆಯಿಂದ ಬಲಗೈಗೆ ಹೊಡೆದಿದ್ದರು. ಗಲಾಟೆ ಸಂಬಂಧ ರವಿ ಪೋಲೀಸರಿಗೆ ದೂರು ಕೊಟ್ಟಿರುತ್ತಾರೆ. ನಂತರ ಪೋಲೀಸರು ದಿ: 28.04.2016 ರಂದು ಮಧ್ಯಾಹ್ನ 02.00 ಸಮಯದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಮಹಜರ್ ಗೆ ನಾನು ಸಹ ಸಹಿ ಮಾಡಿದ್ದೇನೆ. ಮಹಜರ್ ಕಾಲದಲ್ಲಿ ಪೋಲೀಸರು ದೊಣ್ಣೆಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಮಹಜರ್ ಕಾಲದಲ್ಲಿ ಸ್ವಾಮಿ ಮತ್ತು ರವಿ ಅಲ್ಲಿ ಹಾಜರಿದ್ದರು.

ಮಹಜರ್ ಕಾಲದಲ್ಲಿ ಪೋಲೀಸರು ವಶಪಡಿಸಿಕೊಂಡ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾಲು.1 ಎಂದು ಗುರುತಿಸಲಾಗಿದೆ. ಮಹಜರ್ ನಲ್ಲಿನ ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ಮಹಜರ್ ನಲ್ಲಿನ ಸಹಿ ಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2-ಬಿ ಎಂದು ಗುರುತಿಸಲಾಯಿತು.  ಗಲಾಟೆ ಸಂಬಂಧ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ಗಾಡಿ ಜಾಡನ್ನು ಉಪಯೋಗಿಸುವ ಕುರಿತು ಆರೋಪಿತರು ರವಿಗೆ ಹೊಡೆದರು ಎಂದರೆ ಸರಿ. ರವಿಯನ್ನು ಹೊಡೆಯುತ್ತಿದ್ದ ಆರೋಪಿತರನ್ನು ರವಿ ಅಣ್ಣ ರಘು ಪ್ರಶ್ನೆ ಮಾಡಿದ್ದಕ್ಕೆ ಆತನಿಗೆ ಆರೋಪಿತರು ಬೋಳಿ ಮಗನೆ, ಸೂಳೆ ಮಗನೆ ಎಂದು ಬೈದರು ಎಂದರೆ ಸರಿ.  ರಘುವಿಗೆ ದೊಣ್ಣೆಯಿಂದ ಚಂದ್ರು ಹೊಡೆಯಲು ಹೋದಾಗ ಅದನ್ನು ತೆಡೆಯಲು ಹೋದ ರವಿಯ ಕೈಗೆ ಪೆಟ್ಟಾಯಿತು ಎಂದರೆ ಸರಿ.  ಆರೋಪಿತರು ರವಿ ಮತ್ತು ರಘುವಿಗೆ ಇನ್ನೊಮ್ಮೆ ಗಾಡಿ ಜಾಡಿನಲ್ಲಿ ಓಡಾಡಿದರೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸುಳ್ಳು.  ರವಿ ರಸ್ತೆಯಲ್ಲಿ ಹೋಗುವಾಗ ಆತನನ್ನು ಆರೋಪಿತರು ಅಡ್ಡಗಟ್ಟಿದ್ದರು ಎಂದರೆ ಸರಿ.  ಆರೋಪಿತರು ರವಿ ಮತ್ತು ರಘುವಿಗೆ ಕೊಲೆ ಬೆದರಿಕೆ ಹಾಕಿರುವ ವಿಚಾರ ತುಂಬಾ ವರ್ಷವಾದ್ದರಿಂದ ನನಗೆ ನೆನಪಿಲ್ಲ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಚಂದ್ರು ರವರಿಗೆ ಸೇರಿದ ಜಮೀನಿನ ಚೆಕ್ಕು ಬಂದಿ ಹೇಳಲಾಗುವುದಿಲ್ಲ. ಪುಟ್ಟರಾಮು ರವರಿಗೆ ಸೇರಿದ ಜಮೀನಿನ ಚೆಕ್ಕು ಬಂದಿ ಹೇಳಲಾಗುವುದಿಲ್ಲ. ಮಹಜರ್ ಮಾಡಿದ ಜಾಗದ ಚೆಕ್ಕು ಬಂದಿ ಹೇಳಲಾಗುವುದಿಲ್ಲ. ಆರೋಪಿತರ ಜಮೀನಿನ ದಕ್ಷಿಣಕ್ಕೆ ಓಡಾಡಲು ಉಪಯೋಗಿಸಲು ಇಕ್ಕಲು ಇದೆ ಎಂದರೆ ಗೊತ್ತಿಲ್ಲ.  ನಾನು ಗಲಾಟೆ ನಡೆದ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.  ಮಹಜರ್ ಮಾಡಲು ಬಂದ ದಿನಾಂಕ ಹೇಳಲಾಗುವುದಿಲ್ಲ. ರವಿ ಮತ್ತು ರಘು ರವರ ಮಾತು ಕೇಳಿ ಆರೋಪಿತರು ಗಲಾಟೆ ಮಾಡಿದ್ದಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಹಜರ್ ಮಾಡುವ ಕಾಲಕ್ಕೆ ಹಾಜರು ಇರುವಂತೆ ಪೋಲೀಸರು ನೋಟೀಸ್ ನೀಡಿರಲಿಲ್ಲ.  ರವಿ ಮತ್ತು ರಘು ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಗಲಾಟೆ ಸಂಬಂಧ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.